


**ಇತ್ತೀಚಿನ ದಿನಗಳಲ್ಲಿ ಮೂಡಿದ್ದೇ ಅಥವಾ ಈ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಜೀವನದಲ್ಲಿ ಯಾವುದಾದರೂ ವಿಶೇಷ ಘಟನೆ ನಡೆದಿದೆಯೇ?**

ಚಿಕ್ಕ ವಯಸ್ಸಿನಲ್ಲಿದ್ದಾಗ ನಾನು ತುಂಬಾ ವಿಚಿತ್ರವಾಗಿ ವರ್ತಿಸುತ್ತಿದ್ದೆನಂತೆ. ನನಗೆ ಐದಾರು ವರ್ಷ ವಯಸ್ಸಾಗಿದ್ದ ಸಮಯದಲ್ಲಿ ನನ್ನ ಸುತ್ತಮುತ್ತ ಇರುತ್ತಿದ್ದ ವಸ್ತುಗಳನ್ನು ನೋಡಿ ಗಾಬರಿಯಾಗುತ್ತಿದ್ದೆನಂತೆ. ಅವುಗಳ ಕಡೆಗೆ ವಿಚಿತ್ರ ನೋಟವನ್ನು ಹರಿಸುತ್ತಿದ್ದೆನಂತೆ. ಕೆಲವೊಮ್ಮೆ ದಿನನಿತ್ಯ ನೋಡುತ್ತಿದ್ದ ವಸ್ತುಗಳನ್ನೂ ಗುರುತಿಸುತ್ತಿರಲಿಲ್ಲವಂತೆ. (ವಿಲಿಯಂ ವರ್ಡ್ಸ್‌ವರ್ತ್ ಕೂಡ ಇದೇ ರೀತಿ ವರ್ತಿಸುತ್ತಿದ್ದರಂತೆ. ಕೆಲವೊಮ್ಮೆ ಏನನ್ನೋ ಯೋಚಿಸುತ್ತ ನಿಂತಿರುತ್ತಿದ್ದರಂತೆ. ತಾವು ಕಂಡಿದ್ದು ವಾಸ್ತವವೋ ಕಾಲ್ಪನಿಕವೋ ಎಂದು ಪರೀಕ್ಷಿಸಿಕೊಳ್ಳುವುದಕ್ಕೆ ಅವರು ತಮ್ಮ ಹಸ್ತವನ್ನು ನೆಲದ ಮೇಲಿಟ್ಟುಕೊಂಡು ಕಲ್ಲಿನಿಂದ ಕುಟ್ಟಿಕೊಳ್ಳುತ್ತಿದ್ದರಂತೆ!) ನಿಜಾಂಶವೇನೆಂದರೆ, ಆ ಸಮಯದಲ್ಲಿ ನನಗೆ ಸುತ್ತಮುತ್ತ ಇದ್ದ ಯಾವ ವಸ್ತುವೂ ಕಾಣಿಸುತ್ತಿರಲಿಲ್ಲ. ಯಾರಾದರೂ ನನ್ನನ್ನು ಕರೆದರೂ ಕೇಳಿಸುತ್ತಿರಲಿಲ್ಲ. ಆಗ ನನ್ನ ವರ್ತನೆ ವಿಚಿತ್ರವಾಗಿರುತ್ತಿತ್ತು. ಇದನ್ನೇ ನಾನು ಅಮ್ಮನ ಬಳಿ ಒಮ್ಮೆ ಹೇಳಿಕೊಂಡೆ. ಆಕೆಗೆ ಗಾಬರಿ, ಭಯವುಂಟಾಯಿತು. ಸಾಧು-ಸಂತರ ಬಳಿಗೆ ಹೋಗಿ 'ತಾಯತ' ತಂದು ಕಟ್ಟಿದರು; ಏನೂ ಪ್ರಯೋಜನವಾಗಲಿಲ್ಲ. ನಾನು ಸ್ವಲ್ಪ ದೊಡ್ಡವನಾದೆ. ಐಎಸ್‌ಸಿ ಓದತೊಡಗಿದ್ದೆ. ವಿಜ್ಞಾನ ವಿಷಯವನ್ನು ಓದುತ್ತಿದ್ದ ನನ್ನೊಳಗೆ ಒಂದು ರೀತಿಯ 'ವಿಕಾರ' ಭಾವನೆ ಮೂಡತೊಡಗಿತ್ತು. ನಾನು ಓದುವುದನ್ನು ಮಧ್ಯದಲ್ಲಿಯೇ ನಿಲ್ಲಿಸಿ ಮನೆಗೆ ಬಂದೆ. ಅಮ್ಮ ನನ್ನ ಕೈಗೆ 'ಪವಿತ್ರ ದಾರ'ವೊಂದನ್ನು ಕಟ್ಟಿದಳು. ಆಶ್ಚರ್ಯ! ಮನಸ್ಸಿಗೆ ಹಿತವೆನ್ನಿಸಿತ್ತು; ಮನೋವಿಕಾರ ಹೊರಟುಹೋಗಿತ್ತು. ಕೆಲವು ವರ್ಷಗಳ ನಂತರ, ಕಲ್ಕತ್ತಾದಲ್ಲಿದ್ದ ಸಮಯದಲ್ಲಿ ಒಂದು ಬಾರಿ ಇದೇ ರೀತಿ ಆಯಿತು. ಮಾನಸಿಕ ಖಿನ್ನತೆ! ನನಗೆ ಆಗ 28-29 ವರ್ಷ ವಯಸ್ಸು. 'ಎಲ್ಲವೂ ಮುಗಿದುಹೋಯಿತು' ಎನ್ನುವ ಭಾವನೆ ಮೂಡಿತ್ತು. ಈ ಖಿನ್ನತೆ ಎಷ್ಟರ ಮಟ್ಟಿಗೆ ತೀವ್ರವಾಗಿತ್ತೆಂದರೆ, ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ನಾನು ಮುಂದಾಗಿದ್ದೆ. ಸ್ನೇಹಿತನೊಬ್ಬನ ನೆರವಿನಿಂದ ಉಳಿದುಕೊಂಡೆ. ನಂತರ ಉತ್ತಮ ಚಿಕಿತ್ಸೆ ದೊರಕಿತು. ಇದನ್ನೇ ಆಧರಿಸಿ ಮುಂದೊಂದು ದಿನ ನಾನು 'ದುಃಖರೋಗ' ಹೆಸರಿನ ಒಂದು ಕಥೆಯನ್ನು ಬರೆದೆ.

◆ **ನೀವು ಕವನ ರಚನೆಯ ಕಡೆಗೆ ಆಸಕ್ತಿ ತೋರಿಸಿಲ್ಲ. ನಿಮಗೆ ಪ್ರೇಮ, ಕವನ ಇತ್ಯಾದಿಗಳ ಬಗ್ಗೆ ಉದಾಸೀನವೇ ಅಥವಾ ಆಸಕ್ತಿಯೇ ಇಲ್ಲವೇ?**

ಚಿಕ್ಕಂದಿನಿಂದಲೂ ನಾನು ಪ್ರೀತಿ, ಪ್ರೇಮ, ಪ್ರಣಯ ಇತ್ಯಾದಿಗಳಿಗೆ ಅತೀತನಲ್ಲ. ಆದರೆ ಬಹಿರಂಗವಾಗಿ ವ್ಯಕ್ತಪಡಿಸುವುದಕ್ಕೆ ಸಂಕೋಚ ಹಾಗೂ ಭಯ! ಯುವಕನಾಗಿದ್ದಾಗ ಹುಡುಗಿಯರ ಜೊತೆಯಲ್ಲಿ ಬೆರೆಯುವುದಕ್ಕೆ ಹೆದರುತ್ತಿದ್ದೆ. ಹಾಗಾಗಿ ನಾನು ಯಾರ ಮುಂದೆಯೂ ಪ್ರೇಮನಿವೇದನೆ ಮಾಡಿಲ್ಲ. ಯಾರಿಗೂ ಪ್ರೇಮಪತ್ರವನ್ನೂ ಬರೆದಿಲ್ಲ. ಅದೇ ರೀತಿಯಲ್ಲಿ ಕವನ ರಚನೆಯ ಕಡೆಗೆ ನನಗೆ ಒಲವು ಮೂಡಿಲ್ಲ. ಚಿಕ್ಕವನಿದ್ದಾಗ ಒಂದೆರಡು ಬಾರಿ ಕವಿತೆ ಬರೆಯುವ ಪ್ರಯತ್ನ ಮಾಡಿದ್ದೆ. ಆದರೆ 'ಇದು ನನ್ನಿಂದ ಸಾಧ್ಯವಾಗದು' ಎನ್ನಿಸಿ ಬಿಟ್ಟುಬಿಟ್ಟೆ!

◆ **'ಜಲತರಂಗ' (1959) ನಿಮ್ಮ ಮೊದಲ ಕಥೆ. ನಿಮ್ಮ ಮೊದಲ ಕಾದಂಬರಿ 'ಘುಣಪೋಕಾ.' ಇವೆರಡರ ರಚನೆಯ ನಡುವೆ ಸುಮಾರು ಹತ್ತು ವರ್ಷಗಳ**